**ಪಿ ಡಬ್ಲ್ಯೂ-1**

**ಸಿ.ಸಿ ನಂ. 28/2015**

**ದಿನಾಂಕ 14.11.2024 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ.**

ನಾನು ದ್ವಿತೀಯ ಪಿಯುಸಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. 2007 ರಲ್ಲಿ ಮದುವೆಯಾಗಿರುತ್ತೇನೆ. ಆರೋಪಿ 1 ರವರು ನನ್ನ ಮಾವ. ಅವರಿಗೆ ಇಬ್ಬರು ಹೆಂಡತಿಯರು. ಹಿರಿ ಹೆಂಡತಿಗೆ 6 ಜನ ಮಕ್ಕಳು, ಕಿರಿ ಹೆಂಡತಿಗೆ 2 ಮಕ್ಕಳು. ನನ್ನ ಗಂಡ ಹಿರಿಯ ಹೆಂಡತಿ ಮಗ. ನಾನು ಮದುವೆಯಾದ ನಂತರ 6 ವರ್ಷಗಳ ಆರೋಪಿ 1 ರವರು ಮನೆಯಲ್ಲಿ ವಾಸ ಮಾಡಿದ್ದೇನೆ. ಒಟ್ಟು ಕುಟುಂಬದಲ್ಲಿ ಸದಸ್ಯರಲ್ಲಿ ನಡುವೆ ವಿಭಾಗ ಆಗಿರಲಿಲ್ಲ. ನನ್ನ ಗಂಡ ಆರೋಪಿ 1 ರವರ 2 ನೇ ಮಗ. ನನ್ನ ಮದುವೆ ಮುಂಚಿತವಾಗಿ ಆರೋಪಿ ಮನೆಯಲ್ಲಿ ಒಂದು ಟ್ರ್ಯಾಕ್ಟರ್ ಮತ್ತು 1 ಬೈಕ್ ಇತ್ತು ಎಂದರೆ ಸರಿ. ಸದರಿ ಟ್ರ್ಯಾಕ್ಟರ್ ಅನ್ನು ಒಟ್ಟು ಕುಟುಂಬದ ಆದಾಯದಿಂದ ಆರೋಪಿ 1 ರವರು ಜಾಮೀನುದಾರರಾಗಿ ಖರೀದಿ ಮಾಡಿರುತ್ತಾರ ಎಂದರೆ ಗೊತ್ತಿಲ್ಲ. ಮದುಗೆಗಿಂತ ಮುಂಚೆ ನನ್ನ ಗಂಡನ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಬ್ಯಾಂಕಿನಲ್ಲಿ ಜಮೀನನ್ನು ಅಡಮಾನ ಮಾಡಿ ದಿನಾಂಕ 29.08.2005 ರಂದು ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಅಡಮಾನ ಪತ್ರದಲ್ಲಿ ಸಾಕ್ಷಿ ಗಂಡನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು.

ನನ್ನ ಗಂಡನ ಹೆಸರಿನಲ್ಲಿ ಟ್ರ್ಯಾಕ್ಟರ್ ಖರೀದಿ ಮಾಡಿದ ಕಾರಣ ಆರ್ ಸಿ ಅವರ ಹೆಸರಿನಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಟ್ರ್ಯಾಕ್ಟರ್ ನನ್ನ ಗಂಡನ ಸ್ವಂತ ಟ್ರ್ಯಾಕ್ಟರ್ ಆಗಿರುತ್ತದೆ. ಒಟ್ಟು ಕುಟುಂಬದ ಸ್ವತ್ತಾಗಿರುವುದಿಲ್ಲ. ಸದರಿ ಟ್ರ್ಯಾಕ್ಟರ್ ಖರೀದಿಸಲು ಹಣ ಯಾರು ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ಮದುವೆಯಾದ ನಂತರ 2013 ರಲ್ಲಿ ವಿಂಗರ್ ವಾಹನವನ್ನು ನನ್ನ ಗಂಡ ಖರೀದಿ ಮಾಡಿರುತ್ತಾರೆ. ಸದರಿ ವಾಹನ ಖರೀದಿ ಮಾಡುವ ಮುನ್ನ ನನ್ನ ಗಂಡನ ಹೆಸರಿನಲ್ಲಿ ಒಂದು ಮಾರುತಿ ವ್ಯಾನ್ ಇತ್ತು ಎಂದರೆ ಸರಿ. ಸದರಿ ಮಾರಾತಿ ವ್ಯಾನನ್ನು ಮಾರಾಟ ಮಾಡಿ ವಿಂಗರ್ ವಾಹನವನ್ನು ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ವಾಹನಗಳನೆಲ್ಲಾ ಸೇರಿಸಿ ವಿಭಾಗ ಕೋರಿ ದಾವಾ ಹೂಡಿರುತ್ತೇನೆ ಎಂದರೆ ಸರಿ.

ವಿಂಗರ್ ವಾಹನ ಖರೀದಿಸಲು ಶ್ರಿರಾಮ ಫೈನಾನ್ಸ್ ನಿಂದ ಸಾಲ ಪಡೆದುಕೊಂಡಿದ್ದರು ಎಂದರೆ ಸರಿ. 2 ದ್ವಿ ಚಕ್ರ ವಾಹನಗಳ ಆರ್ ಸಿ ನನ್ನ ಗಂಡನ ಹೆಸರಿನಲ್ಲೆ ಇರುತ್ತದೆ. ವಾಹನ ಸಂಖ್ಯೆ 2635 ಗುರುಸ್ವಾಮಿ ಯವರು ಪಾನಾನ್ಸ್ ಮಾಡಿ ನನ್ನ ಗಂಡನ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮದುವೆಯಾದ 5-6 ವರ್ಷಗಳ ನಂತರ ಬೇರೆ ಬೇರೆ ಮಾಡಿರುತ್ತೇವೆ. ಸದರಿ ಸಮಯದಲ್ಲಿ ನನ್ನ ಮತ್ತು ಆರೋಪಿ 1 ರವರು ನಡುವಿನ ಸಂಬಂದ ಸುಮಾರಾಗಿತ್ತು. ಬಾಡಿಗೆ ಮನೆಗೆ ನಾನು ಮುಂಗಡ ಹಣ ಪಾವತಿ ಮಾಡಿರುತ್ತೇನೆ. ದಿನಾಂಕ 01.04.2014 ರಂದು ನನ್ನ ಗಂಡ ಮೃತ ಪಟ್ಟಿರುತ್ತಾರೆ. ನನ್ನ ಗಂಡ ಮೃತ ಪಟ್ಟ ನಂತರ ಸ್ವಲ್ಪ ದಿನ ಬಾಡಿಗೆ ಮನೆಯಲ್ಲಿದ್ದು ನಂತರ ನನ್ನ ತಂದೆ ಮನೆಗೆ ಹೋಗಿರುತ್ತೇನೆ. ಸದರಿ ಟ್ರ್ಯಾಕ್ಟರ್ ಬಾಡಿಗೆ ಮನೆಯಲ್ಲಿ ಇತ್ತು. ಸದರಿ ಟ್ರ್ಯಾಕ್ಟರ್ ಆರೋಪಿ ಗಳ ಮನೆ ಬಳಿ ಇತ್ತು ಎಂದರೆ ಸರಿಯಲ್ಲ. ವಿಂಗರ್ ವಾಹನವನ್ನು ಶ್ರೀರಾಮ ಫೈನಾನ್ಸ್ ನವರು ಸಾಲ ತೀರಿಸಿಲ್ಲ ಎಂದು ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಬಾಡಿಗೆ ಮನೆಯ ಅಕ್ಕ ಪಕ್ಕ ಮನೆಗಳು ಇರುತ್ತವೆ. ದಿನಾಂಕ 10.03.2014 ರಂದು ಪೋಲೀಸ್ ಠಾಣೆಗೆ ದೂರು ಸಲ್ಲಿಸಿರುವುದಿಲ್ಲ. ಸದರಿ ದಿನ ಆರೋಪಿ ಗಳು ಬಂದಿರುದನ್ನು ಯಾರಾದರು ನೋಡಿದ್ದಾರಾ ಎಂದರೆಯಾರು ಇರಲಿಲ್ಲ ಎಂದು ನುಡಿಯುತ್ತಾರೆ.

**ಮುಂದವರಿದ ಪಾಟೀಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯತು.**

(ತೆರೆದ ನ್ಯಾ. ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.